ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೧೦

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತನೆಯ ಅಧಿವೇಶನ
(ಮುಂದುವರೆದ ಉಪವೇಶನ)

**ಮಂಗಳವಾರ, ದಿನಾಂಕ ೨೯ನೇ ಮಾರ್ಚ್ ೨೦೧೬**

---

**ಸಮೂಹ – II**

೧. ಇಂಧನ ಸಚಿವರು

೨. ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

೩. ಕೃಷಿ ಮಾರುಕಟ್ಟೆ ಮತ್ತು ತೋಟಗಾರಿಕೆ ಸಚಿವರು

೪. ಲೋಕೋಪಯೋಗಿ ಸಚಿವರು

೫. ಸಹಕಾರ ಮತ್ತು ಸಕ್ಕರೆ ಸಚಿವರು

೬. ಕೃಷಿ ರಾಜ್ಯ ಸಚಿವರು

೭. ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು

---

### ಹಾವೇರಿ ಜಿಲ್ಲೆಯ ಹೆಸ್ಕಾಂ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಬಗ್ಗೆ

**ಶ್ರೀ ಸೋಮಣ್ಣ .ಮ ಬೇವಿನಮರದ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೬ (೧೧೫೩) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಹಾವೇರಿ ಜಿಲ್ಲೆಯ, ಹೆಸ್ಕಾಂ ವ್ಯಾಪ್ತಿಯಲ್ಲಿ ಅನಿಯಮಿತ ಅಸಮರ್ಪಕವಾದ ವಿದ್ಯುತ್ ಸರಬರಾಜಿನಿಂದ ಸಾರ್ವಜನಿಕರು, ಕೃಷಿಕರು ಹಾಗೂ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರೈತರು ಹಾಗೂ ವಿದ್ಯಾರ್ಥಿಗಳಿಗೆ ಪರೀಕ್ಷಾ ಸಮಯದಲ್ಲಿ ವಿದ್ಯುತ್ ಸಮಸ್ಯೆಯಿಂದ ಪರಿಹಾರ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಇ) ಹೆಸ್ಕಾಂ ವ್ಯಾಪ್ತಿಯ ಬಂಕಾಪುರದಲ್ಲಿ ಜೋತು ಬಿದ್ದಿರುವ ತಂತಿಗಳು ಬೇವಿನ ಹಳ್ಳಿಯಲ್ಲಿ ಶಿಥಿಲಾವಸ್ಥೆಯ ಕಂಬಗಳಿಂದ ಅಪಾಯಕಾರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ವಿವರ ನೀಡುವುದು)

## ಲೋಡ್ ಶೆಡ್ಡಿಂಗ್ ಮಾಡುತ್ತಿರುವ ಬಗ್ಗೆ

**ಶ್ರೀಮತಿ ವಿಮಲಾಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೩೭೭ (೧೨೪೦) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿರುವ ಒಟ್ಟು ವಿದ್ಯುತ್ ಉತ್ಪಾದನಾ ಘಟಕಗಳೆಷ್ಟು ; ಇವುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗೂ ಕಾರ್ಯನಿರ್ವಹಿಸದೆ ಇರುವ ಘಟಕಗಳೆಷ್ಟು ;

(ಆ) ರಾಜ್ಯಕ್ಕೆ ಇರುವ ವಿದ್ಯುತ್ ಅಗತ್ಯವೆಷ್ಟು ; ಈಗ ರಾಜ್ಯ ತನ್ನ ಸಂಪನ್ಮೂಲಗಳಿಂದ ಸರಬರಾಜು ಮಾಡುತ್ತಿರುವ ವಿದ್ಯುತ್ ಎಷ್ಟು ; ಕೊರತೆಯ ವಿದ್ಯುತ್‌ನ್ನು ಪಡೆಯುವ ಮೂಲಗಳಾವುವು ; ಈ ವಿದ್ಯುತ್‌ಗೆ ನೀಡುತ್ತಿರುವ ದರವೇನು ;

(ಇ) ಗ್ರಾಮೀಣ ಪ್ರದೇಶಗಳಲ್ಲಿ ದಿನಕ್ಕೆ ಎಷ್ಟು ಗಂಟೆ ವಿದ್ಯುತ್ ಒದಗಿಸಲಾಗುತ್ತಿದೆ ;

ಈ) ಬೆಂಗಳೂರು ನಗರ ಸೇರಿದಂತೆ ರಾಜ್ಯದ ಇತರೆ ನಗರಗಳಿಗೆ ಪ್ರತಿದಿನ ಎಷ್ಟು ಗಂಟೆಗಳ ಕಾಲ ಲೋಡ್ ಶೆಡ್ಡಿಂಗ್ ಜಾರಿಯಲ್ಲಿದೆ ; (ಪೂರ್ಣ ಮಾಹಿತಿ ನೀಡುವುದು)

ಉ) ಪಿ.ಯು.ಸಿ. ಮತ್ತು ಎಸ್.ಎಸ್.ಎಲ್.ಸಿ. ಪರೀಕ್ಷೆಗಳು ನಡೆಯುತ್ತಿರುವುದರಿಂದ ಲೋಡ್ ಶೆಡ್ಡಿಂಗ್ ಕಾರಣ ಹೇಳಿ ವಿದ್ಯುತ್ ಕಡಿತಗೊಳಿಸುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಹಾಗಿದ್ದರೆ, ಸರ್ಕಾರ ವಿದ್ಯಾರ್ಥಿಗಳ ಭವಿಷ್ಯದ ದೃಷ್ಟಿಯಿಂದ ಲೋಡ್ ಶೆಡ್ಡಿಂಗ್ ಮಾಡದಿರಲು ಕ್ರಮಕೈಗೊಳ್ಳುವುದೇ ? (ವಿವರ ನೀಡುವುದು)

## ಜಯಪುರ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಕಡಿತಗೊಳಿಸುತ್ತಿರುವ ಬಗ್ಗೆ

**ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೧೩೮ (೧೧೦೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಚಿಕ್ಕಮಗಳೂರು ಜಿಲ್ಲೆಯ, ಕೊಪ್ಪ ತಾಲ್ಲೂಕಿನ ಮೇಗುಂದಾ ಹೋಬಳಿಯ ಕೇಂದ್ರ ಸ್ಥಳವಾದ ಜಯಪುರ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಪ್ರದೇಶದಲ್ಲಿ ಪದೇ ಪದೇ ವಿದ್ಯುತ್ ಕಡಿತಗೊಳಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು ;

(ಆ) ಈಗಾಗಲೇ ಪಿ.ಯು.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷೆ ಪ್ರಾರಂಭವಾಗಿದ್ದು, ಮುಂದಿನ ದಿನಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ ಕೂಡ ಬರುತ್ತಿದ್ದು, ಇದರಿಂದ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ತುಂಬಾ ತೊಂದರೆಯಾಗುತ್ತಿದ್ದು, ಸರ್ಕಾರ ಈ ತೊಂದರೆಯನ್ನು ಸರಿಪಡಿಸಲು ಏನು ಕ್ರಮಕೈಗೊಳ್ಳುವುದು ;

(ಇ) ಈಗಾಗಲೇ ಈ ವಿಚಾರವಾಗಿ ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳು ಜಯಪುರ ಮೆಸ್ಕಾಂ ಕಚೇರಿಯೆದುರು ಬೃಹತ್ ಪ್ರತಿಭಟನೆ ಮಾಡಿ ಮನವಿಯನ್ನು ಸಲ್ಲಿಸಿದ್ದು, ಈ ಕುರಿತು ಏನು ಕ್ರಮ ಕೈಗೊಳ್ಳಲಾಗಿದೆ ; ಯಾವ ಕಾಲಮಿತಿಯಲ್ಲಿ ಈ ಸಮಸ್ಯೆ ಬಗೆಹರಿಸಲು ಸರ್ಕಾರ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು)

## ವಿದ್ಯುತ್ ಕೊರತೆ ಬಗ್ಗೆ

**ಶ್ರೀ ಎಸ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** –

೧೩೯ (೧೧೭೭) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಮಂಡ್ಯ ಜಿಲ್ಲೆಯಲ್ಲಿ ವಿದ್ಯುತ್ ಅಭಾವದಿಂದ ರೈತರ ಪಂಪ್‌ಸೆಟ್‌ಗಳು ಸಮಯಕ್ಕೆ ಸರಿಯಾಗಿ ಕಾರ್ಯನಿರ್ವಹಿಸದೇ ರೈತರ ಬೆಳೆಗೆ ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತಾಲ್ಲೂಕುವಾರು ವಿವರ ನೀಡುವುದು ;

(ಆ) ವಿದ್ಯುತ್ ಅಭಾವದಿಂದ ರೈತರ ಬೆಳೆ ನಷ್ಟವಾದ ಪ್ರಕರಣಗಳಲ್ಲಿ ಸರ್ಕಾರ ಪರಿಹಾರ ನೀಡಿದೆಯೇ ; (ವಿವರ ನೀಡುವುದು)

(ಇ) ಮಂಡ್ಯ ಜಿಲ್ಲೆಯಲ್ಲಿನ ವಿದ್ಯುತ್ ಕೊರತೆ ನೀಗಿಸಲು ಸರ್ಕಾರ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

ಈ) ಮಂಡ್ಯ ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನೆಗೆ ಸರ್ಕಾರ ಚಿಂತಿಸಿದೆಯೇ ? ಹಾಗಿದ್ದಲ್ಲಿ, ವಿವರ ನೀಡುವುದು

## ಕೊಡಗು ಜಿಲ್ಲೆಗೆ ನಗರೋತ್ಥಾನ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದ ಬಗ್ಗೆ

**ಶ್ರೀ ಸುನೀಲ್ ಸುಬ್ರಮಣಿ ಎಂ.ಪಿ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೦ (೧೧೨೯) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ೨೦೧೫–೧೬ನೇ ಸಾಲಿನಲ್ಲಿ ನಗರೋತ್ಥಾನ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಆ) ಕೊಡಗು ಜಿಲ್ಲೆಗೆ ಈ ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ; ಅನುಮೋದಿತ ಕಾಮಗಾರಿಗಳು ಯಾವುವು ; (ಮಾಹಿತಿ ಒದಗಿಸುವುದು)

(ಇ) ಕಾಮಗಾರಿಗಳು ಆರಂಭಗೊಂಡಿದ್ದಲ್ಲಿ, ಯಾವ ಹಂತದಲ್ಲಿವೆ ; (ಪೂರ್ಣಗೊಂಡ/ ಅಪೂರ್ಣಗೊಂಡಿರುವ ಕಾಮಗಾರಿಗಳ ವಿವರ ನೀಡುವುದು)

ಈ) ಕಾಮಗಾರಿಗಳು ಅಪೂರ್ಣಗೊಂಡಿದ್ದಲ್ಲಿ, ಕಾರಣ ಏನು ? (ವಿವರ ನೀಡುವುದು)

## ಕೃಷಿ ಭಾಗ್ಯ ಯೋಜನೆ ಬಗ್ಗೆ

**ಶ್ರೀ ಬಸನಗೌಡ ಆರ್. ಪಾಟೀಲ್ (ಯತ್ನಾಳ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೧ (೧೧೦೩) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿ ಬರಪೀಡಿತ ಜಿಲ್ಲೆಗಳಿಗೆ ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ವಿಶೇಷ ಪ್ಯಾಕೇಜ್ ನೀಡಲಾಗಿದೆಯೇ ; (ಜಿಲ್ಲಾವಾರು, ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)

(ಆ) ಈ ಯೋಜನೆಯಡಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನು ಕೈಬಿಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಯಾವ ಅಧ್ಯಯನದ ಆಧಾರದ ಮೇಲೆ ಈ ಜಿಲ್ಲೆಗಳನ್ನು ಹೊರತುಪಡಿಸಲಾಗಿದೆ ; ಇದಕ್ಕೆ ಕಾರಣವಾದ ಅಂಶಗಳೇನು ; (ಮಾಹಿತಿ ನೀಡುವುದು)

ಈ) ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳು ನೀಡಿದ ವರದಿ ಸರಿಯೇ ;

ಉ) ವಿಜಯಪುರ–ಬಾಗಲಕೋಟೆ ಜಿಲ್ಲೆಗಳಿಗೆ ವಿಶೇಷ ಪ್ಯಾಕೇಜ್ ನೀಡುವ ಉದ್ದೇಶ ಸರ್ಕಾರಕ್ಕಿದೆಯೇ ; ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರವಾದ ಮಾಹಿತಿ ನೀಡುವುದು)

## ನಗರ ಸಭೆಗಳು ವಿವಿಧ ರೂಪದ ತೆರಿಗೆ ನಿಗದಿಪಡಿಸುವ ಕುರಿತಾದ ಏಕರೂಪತೆ

**ಶ್ರೀ ಕೆ.ಸಿ. ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೨ (೧೧೪೦) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದಲ್ಲಿನ ಬಹುಪಾಲು ನಗರ ಸಭೆಗಳು ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಆಕರಣೆ ಮಾಡುತ್ತಿರುವ ತೆರಿಗೆ ಮೊತ್ತವನ್ನು ಸರ್ಕಾರದ ನಿಗದಿತ ಲೆಕ್ಕ–ಶೀರ್ಷಿಕೆಗೆ ಜಮಾ ಮಾಡದೇ ಇರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಆ ಕುರಿತಾದ ವಿವರಗಳೇನು ;

(ಆ) ಹೀಗೆ ವಸೂಲಿ ಮಾಡಿದ ಆಸ್ತಿ ತೆರಿಗೆಯನ್ನು ನಗರ ಸಭೆಗಳು ಸರ್ಕಾರದ ನಿಗದಿತ ಲೆಕ್ಕ–ಶೀರ್ಷಿಕೆಗೆ ಜಮಾ ಮಾಡದೇ ಇದ್ದರೆ, ಸರ್ಕಾರ ಅಂತಹ ನಗರ ಸಭೆಗಳ ವಿರುದ್ಧ ಕೈಗೊಳ್ಳುವ ಕ್ರಮಗಳ ವಿವರಗಳೇನು ;

(ಇ) ಈ ತೆರಿಗೆ ಪದ್ಧತಿಯಡಿ ನಗರ ಸಭೆಗಳು ವಿವಿಧ ಮಾದರಿ ಕಟ್ಟಡಗಳಿಗೆ ವಿಧಿಸಬೇಕಾದ ತೆರಿಗೆ ದರದ ಪ್ರಮಾಣದ ಮಿತಿ ಎಷ್ಟು ; ಈ ತೆರಿಗೆ ದರ ನಿಗದಿಪಡಿಸುವಲ್ಲಿ ಅನುಸರಿಸುವ ಏಕರೂಪದ ಮಾನದಂಡಗಳೇನು ;

ಈ) ಹೈದರಾಬಾದ್–ಕರ್ನಾಟಕ ವ್ಯಾಪ್ತಿಯ ಜಿಲ್ಲೆಗಳಲ್ಲಿನ ನಗರ ಸಭೆಗಳ ವಿವರ, ನಗರ ಸಭೆಗಳ ವ್ಯಾಪ್ತಿಗಳಲ್ಲಿನ ನಗರ ಸಭೆವಾರು ಆಸ್ತಿ ಸಂಖ್ಯೆಗಳ ವಿವರ, ಕಳೆದ ೨೦೧೩–೧೪ ರಿಂದ ೨೦೧೫–೧೬ನೇ ಸಾಲಿನ ಫೆಬ್ರವರಿ ಅಂತ್ಯದವರೆಗೆ ಈ ಎಲ್ಲಾ ನಗರ ಸಭೆಗಳು ಆಕರಣೆ ಮಾಡಿದ ಆಸ್ತಿ ತೆರಿಗೆ ಮೊತ್ತದ ವರ್ಷವಾರು, ತಿಂಗಳುವಾರು, ನಗರಸಭೆವಾರು ವಿವರಗಳ ಸಮಗ್ರ ಮಾಹಿತಿಯನ್ನು ನೀಡುವುದು ?

## ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪತ್ತಿ ಮತ್ತು ಬಳಕೆ ಬಗ್ಗೆ

**ಶ್ರೀ ಬಿ.ಜೆ. ಪುಟ್ಟಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೩ (೧೧೫೫) ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹಾಗೂ ವಿದ್ಯುತ್ ಬಳಕೆಗೆ ಇರುವ ಅಂತರ ಎಷ್ಟು ;

(ಆ) ಈ ಅಂತರವನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ೨೦೦೯–೧೦ ರಿಂದ ೨೦೧೫–೧೬ರವರೆಗೆ ಹೊಸದಾಗಿ ವಿದ್ಯುತ್ ಉತ್ಪಾದನೆ ಮಾಡಲು ತೆಗೆದುಕೊಂಡಿರುವ ಕ್ರಮಗಳೇನು ? (ಪೂರ್ಣ ವಿವರ ನೀಡುವುದು)

## ಕುಂದಾಪುರ ಪುರಸಭೆಯಲ್ಲಿ ರಿಂಗ್‌ರೋಡ್ ರಚಿಸುವ ಕುರಿತು

**ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೪ (೧೨೩೭) ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳು, ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕುಂದಾಪುರ ಪುರಸಭೆಯ ಮೂರು ಕಡೆಗಳು ಹೊಳೆಯಿಂದ ಆವೃತವಾಗಿರುವುದರಿಂದ ಆ ಭಾಗಗಳ ಜನ–ಜಾನುವಾರು ವಾಹನಗಳ ಸಂಚಾರಕ್ಕಾಗಿ ಹೊರಭಾಗದಲ್ಲಿ ರಿಂಗ್ ರೋಡ್ ನಿರ್ಮಿಸಲು ತಗಲುವ ಅಂದಾಜು ವೆಚ್ಚ ಎಷ್ಟು ;

(ಆ) ಪುರಸಭೆಯಲ್ಲಿ ಈ ಮೇಲೆ ಹೇಳಿದ ರಸ್ತೆಯ ವೆಚ್ಚವನ್ನು ಭರಿಸಲು ಅನುದಾನದ ಕೊರತೆಯ ಹಿನ್ನಲೆಯಲ್ಲಿ ಈ ವೆಚ್ಚವನ್ನು ಸರ್ಕಾರ ಭರಿಸುವುದೇ ; ಇಲ್ಲವಾದಲ್ಲಿ, ಕುಂದಾಪುರ ಪುರಸಭೆಯ ಬಹುಜನಗಳ ಬೇಡಿಕೆ ಪೂರೈಕೆಗಳನ್ನು ಅನುಷ್ಠಾನಗೊಳಿಸಲಾಗುವುದು ಹೇಗೆ ;

(ಇ) ಮೇಲೆ ಹೇಳಿದ ರಿಂಗ್ ರೋಡಿನ ಸಾಧಕ–ಬಾಧಕಗಳನ್ನು ಸರ್ಕಾರ ಅಧ್ಯಯನ ನಡೆಸಿದೆಯೇ ; ಅಧ್ಯಯನ ನಡೆಸಿದ್ದಲ್ಲಿ, ಅದರ ಪ್ರತಿಯನ್ನು ಒದಗಿಸುವುದು ?

## ಐ.ಟಿ.ಐ. ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಅವ್ಯವಹಾರದ ಬಗ್ಗೆ

**ಶ್ರೀಮತಿ ಮೋಟಮ್ಮ (ವಿಧಾನಸಭೆಯಿಂದ ಚುನಾಯಿತರಾದವರು ) –**

೧೪೫ (೧೨೦೮) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಐಟಿಐ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತದ ಹಾಲಿ ಅಧ್ಯಕ್ಷರು ಎಳ್ಳುಕುಂಟೆ ಬಡಾವಣೆಯಲ್ಲಿ ನಿವೇಶನ ಸಂಖ್ಯೆ ೪೧೯ನ್ನು ಕಾನೂನಿನಡಿ ಪಡೆದಿದ್ದಲ್ಲಿ, ಸಂಘಕ್ಕೆ ಅರ್ಜಿ ಸಲ್ಲಿಸಲಾಗಿದೆಯೇ ; ಆಡಳಿತ ಮಂಡಳಿ ತೀರ್ಮಾನ ಪಡೆಯಲಾಗಿದೆಯೇ ; ೩೦(ಬಿ) ನಿರ್ದೇಶನದಡಿ ಇಲಾಖೆಯ ಅನುಮೋದನೆ ಪಡೆಯಲಾಗಿದೆಯೇ ; (ಪಡೆದಿದ್ದಲ್ಲಿ, ದೃಢೀಕೃತ ದಾಖಲಾತಿ ಸಹಿತ ಮಾಹಿತಿ ನೀಡುವುದು)

(ಆ) ಸಂಘದ ಹಾಲಿ ಅಧ್ಯಕ್ಷರು ಕಾನೂನು ಬಾಹಿರವಾಗಿ ನಿವೇಶನ ಪಡೆದಿರುವ ಬಗ್ಗೆ ಸಂಘದ ಹಲವಾರು ಅವ್ಯವಹಾರಗಳ ಬಗ್ಗೆ ಇಲಾಖಾಧಿಕಾರಿಗಳು ೨೯(ಸಿ)ರಡಿಯಲ್ಲಿ ನೀಡಿರುವ ನೋಟೀಸ್ ಸಂಖ್ಯೆ: ಜೆ.ಆರ್.ಬಿ./೭೫/ಗೃಹ/ ೨೦೧೪-೧೫, ದಿನಾಂಕ: ೨೬.೦೮.೨೦೧೪ರ ಬಗ್ಗೆ ಏಕೆ ವಿಚಾರಣೆ ನಡೆಸಿಲ್ಲ, ೨೯(ಸಿ) ಅಡಿಯಲ್ಲಿ ಏಕೆ ಅಧ್ಯಕ್ಷರನ್ನು ಅನರ್ಹಗೊಳಿಸಲು ಕಾನೂನು ಕ್ರಮ ಕೈಗೊಂಡಿಲ್ಲ; (ದೃಢೀಕೃತ ದಾಖಲಾತಿ ಸಹಿತ ಮಾಹಿತಿ ನೀಡುವುದು)

(ಇ) ಸಂಘಕ್ಕೆ ಅಪರ ನಿಬಂಧಕರು (ಕೈ&ಇ)ರವರ ನಿವೇಶನ ನೋಂದಣಿ ತಡೆಯಾಜ್ಞೆ ಪತ್ರದ ದಿನಾಂಕ: ೦೮.೦೭.೨೦೧೩ರ ಆದೇಶವನ್ನು ಉಲ್ಲಂಘಿಸಿ, ನಾಯಂಡಹಳ್ಳಿ ಬಡಾವಣೆಯಲ್ಲಿ ಸದಸ್ಯರೇ ಅಲ್ಲದ ೪ ಜನರಿಗೆ ಹಣ ಪಡೆಯದೇ, ३೦(ಬಿ) ನಿರ್ದೇಶನ ಉಲ್ಲಂಘಿಸಿ, ಸಂಘದ ನಿವೇಶನಗಳನ್ನು ಅಂದಿನ ಕಾರ್ಯದರ್ಶಿ ಜೊತೆ ಸೇರಿ ನೋಂದಾಯಿಸಿಕೊಟ್ಟು ಅವ್ಯವಹಾರ ನಡೆಸಿರುವ ಹಾಲಿ ನಿರ್ದೇಶಕರನ್ನು ಇಲಾಖಾ ಅಧಿಕಾರಿಗಳು ಏಕೆ ೨೯(ಸಿ)ರಡಿಯಲ್ಲಿ ಅನರ್ಹಗೊಳಿಸಿಲ್ಲ; (ದೃಢೀಕೃತ ದಾಖಲಾತಿ ಸಹಿತ ಮಾಹಿತಿ ನೀಡುವುದು)

ಈ) ಸಂಘವು ನಿರ್ಮಾಣ ಮಾಡಿರುವ ಬಡಾವಣೆಗಳಲ್ಲಿ ನಿಯಮಗಳನ್ನು ಉಲ್ಲಂಘಿಸಿ ಒಬ್ಬ ಸದಸ್ಯರಿಗೆ ಎರಡು ನಿವೇಶನಗಳನ್ನು, ಒಂದೇ ಕುಟುಂಬಕ್ಕೆ ಎರಡು ನಿವೇಶನಗಳನ್ನು ಹಂಚಿಕೆ ಮಾಡಿ ನೋಂದಣಿ ಮಾಡಿ ಅವ್ಯವಹಾರ ನಡೆಸಿರುವ ಬಗ್ಗೆ ಇಲಾಖೆಯವರು ಸಂಘದ ಹಾಲಿ ಅಧ್ಯಕ್ಷ ಹಾಗೂ ಆಡಳಿತ ಮಂಡಳಿಯ ಮೇಲೆ ಕೈಗೊಂಡಿರುವ ಕ್ರಮವೇನು ? (ದೃಢೀಕೃತ ದಾಖಲಾತಿ ಸಹಿತ ಮಾಹಿತಿ ನೀಡುವುದು)

## ರಾಜ್ಯದ ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆ ಹಾಗೂ ಪಶು ವೈದ್ಯಾಧಿಕಾರಿಗಳ ಕುರಿತು ಮಾಹಿತಿ

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ ) –**

೧೪೬ (೧೨೦೯) ಪಶುಸಂಗೋಪನೆ ಮತ್ತು ರೇಷ್ಮೆ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯದ ಪಶುಸಂಗೋಪನಾ ಇಲಾಖೆಯಡಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಒಟ್ಟು ಎಷ್ಟು ಪಶು ಚಿಕಿತ್ಸಾಲಯ, ಪಶು ಆಸ್ಪತ್ರೆ ಪಾಲಿಕ್ಲಿನಿಕ್ ಆಸ್ಪತ್ರೆ ಹಾಗೂ ಮುಂತಾದ ಆಸ್ಪತ್ರೆಗಳು ಇರುತ್ತವೆ ; (ತಾಲ್ಲೂಕು ಹಾಗೂ ಜಿಲ್ಲಾವಾರು ವಿವರ ನೀಡುವುದು)

(ಆ) ೨೦೧೬–೧೭ನೇ ಸಾಲಿನಲ್ಲಿ ಹೊಸದಾಗಿ ಪಶು ಚಿಕಿತ್ಸಾಲಯ ಪ್ರಾರಂಭಿಸುವ ಅಥವಾ ಸದ್ಯ ಇರುವ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ ಸರ್ಕಾರದ ಹಂತದಲ್ಲಿ ಇದೆಯೇ ; ಹಾಗಿದ್ದಲ್ಲಿ, ವಿವರವಾದ ಮಾಹಿತಿ ನೀಡುವುದು ;

(ಇ) ಪಶು ಸಂಗೋಪನಾ ಇಲಾಖೆಯಲ್ಲಿ ಪಶು ವೈದ್ಯಾಧಿಕಾರಿಗಳ, ಸಹಾಯಕ ನಿರ್ದೇಶಕರ, ಉಪ ನಿರ್ದೇಶಕರ, ಜಂಟಿ ನಿರ್ದೇಶಕರುಗಳ ಹಾಗೂ ಇತರೆ ಸಿಬ್ಬಂದಿಗಳ ಕೊರತೆ ಇರುವುದು ನಿಜವೇ ; ಹಾಗಿದ್ದಲ್ಲಿ, ಒಟ್ಟು ಎಷ್ಟು ಪಶು ವೈದ್ಯರುಗಳ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ; (ವಿವರ ನೀಡುವುದು)

ಈ) ೨೦೧೬–೧೭ನೇ ಸಾಲಿನಲ್ಲಿ ಹೊಸ ಪಶು ವೈದ್ಯಾಧಿಕಾರಿಗಳ ಹಾಗೂ ಇತರೆ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳುವ ಯೋಜನೆ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ ; ಹಾಗಿದ್ದಲ್ಲಿ, ಎಷ್ಟು ವೈದ್ಯರುಗಳ ಮತ್ತು ಇತರೆ ಸಿಬ್ಬಂದಿಗಳ ನೇಮಕಾತಿ ಮಾಡಿಕೊಳ್ಳಲಾಗುವುದು ?

## ಭಾಗ್ಯಲಕ್ಷ್ಮೀ ಸಹಕಾರ ಸಕ್ಕರೆ ಕಾರ್ಖಾನೆ ಸಿಬ್ಬಂದಿಗೆ Back arrears ನೀಡುವ ಬಗ್ಗೆ

**ಶ್ರೀ ಮಹಾಂತೇಶ್ ಶಿವಾನಂದ ಕೌಜಲಗಿ (ಪದವೀಧರರ ಕ್ಷೇತ್ರ ) –**

೧೪೭ (೧೨೪೭) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಬೆಳಗಾವಿ ಜಿಲ್ಲೆ, ಖಾನಾಪುರ ತಾಲ್ಲೂಕಿನ ಭಾಗ್ಯಲಕ್ಷ್ಮೀ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಲೈಲಾ ಶುಗರ್ಸ್‌ಗೆ ಯಾವಾಗ ಲೀಸ್‌ಗೆ ಕೊಡಲಾಯಿತು ; ಎಷ್ಟು ವರ್ಷಗಳ ಅವಧಿಗೆ ಕೊಡಲಾಯಿತು ;

(ಆ) ಲೀಸ್‌ಗೆ ಕೊಡುವ ಸಂದರ್ಭದಲ್ಲಿ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗೆ Back arrears ಕೊಡುವಂತೆ ಒಪ್ಪಂದವಾಗಿರುವುದು ನಿಜವಲ್ಲವೇ ; ಈಗಾಗಲೇ ವಿ.ಆರ್.ಎಸ್. ತೆಗೆದುಕೊಂಡ ಸಿಬ್ಬಂದಿಗಳಿಗೆ ಎಷ್ಟು ಹಣವನ್ನು ಕೊಡಲಾಗಿದೆ ;

(ಇ) ಒಪ್ಪಂದದ ಪ್ರಕಾರ ಅಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗೆ ಎಷ್ಟು ಹಣವನ್ನು Back arrears ರೂಪದಲ್ಲಿ ಕೊಡಬೇಕಾಗಿದೆ ; ಅದನ್ನು ಯಾವಾಗ ಕೊಡಲಾಗುವುದು ; ವಿಳಂಬಕ್ಕೆ ಕಾರಣವೇನು ?

## ಸರ್ಕಾರಿ 'ಡಿ' ಗ್ರೂಪ್ ನೌಕರರ ಸಂಘದ ಬಗ್ಗೆ

**ಶ್ರೀ ಅಶ್ವತ್ ನಾರಾಯಣ (ವಿಧಾನಸಭೆಯಿಂದ ಚುನಾಯಿತರಾದವರು) –**

೧೪೮ (೧೨೧೦) ಸಹಕಾರ ಮತ್ತು ಸಕ್ಕರೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ರಾಜ್ಯ ಸರ್ಕಾರಿ 'ಡಿ' ಗ್ರೂಪ್ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ನೋಂ) ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಯ ಗಿಡದಕೋನೇನಹಳ್ಳಿ, ಶ್ರೀಗಂಧದ ಕಾವಲ್, ಮಲ್ಲತ್ತಹಳ್ಳಿ ಹಾಗೂ ಇತರೆ ಗ್ರಾಮಗಳಲ್ಲಿ ಗೃಹ ನಿರ್ಮಾಣ ಸಹಕಾರ ಸಂಘದ ಸದಸ್ಯರಿಗೆ ನಿವೇಶನ ಹಂಚಲು ಖರೀದಿಸಿರುವ ಒಟ್ಟು ಜಮೀನು ಎಷ್ಟು; ಸರ್ವೆ ನಂಬರ್ ಸಹಿತ ವಿವರ ನೀಡುವುದು ;

(ಆ) ಖರೀದಿ ಮಾಡಿದ ಜಮೀನಿನಲ್ಲಿ ನಕ್ಷೆ ಮಂಜೂರಾದ ಒಟ್ಟು ಜಮೀನಿನ ವಿಸ್ತೀರ್ಣ ಎಷ್ಟು ; ಮಂಜೂರಾದ ನಕ್ಷೆ ಒದಗಿಸುವುದು ;

(ಇ) ಇದುವರೆವಿಗೂ ಒಟ್ಟು ಎಷ್ಟು ಸದಸ್ಯರಿಗೆ ಯಶವಂತಪುರ ಹೋಬಳಿ ಮಲ್ಲತ್ತಹಳ್ಳಿ, ಶ್ರೀಗಂಧದಕಾವಲ್, ಗಿಡದಕೋನೇನಹಳ್ಳಿಯಲ್ಲಿ ವಿತರಿಸಲಾಗಿದೆ ;

ಈ) ಸದಸ್ಯರಿಗೆ ನಿವೇಶನಗಳನ್ನು ವಿತರಿಸಿ, ಮತ್ತೆ ನಿವೇಶನ ಸಂಖ್ಯೆಯನ್ನು ಬದಲಾವಣೆ ಮಾಡಿ ಸದಸ್ಯರಿಗೆ ವಂಚಿಸುತ್ತಿರುವುದು ಸರ್ಕಾರದ ಗಮನಕ್ಕೆ

ಬಂದಿದೆಯೇ ; ಸದರಿ 'ಡಿ' ಗ್ರೂಪ್ ಗೃಹ ನಿರ್ಮಾಣ ಸಂಘದ ವಿರುದ್ಧ ನೀಡಿರುವ ನಿವೇಶನ ವಂಚಿತರು ಎಷ್ಟು ; (ಹೆಸರು ಸಹಿತ ವಿವರ ನೀಡುವುದು)

ಉ) ಭವಾನಿ ಗೃಹ ನಿರ್ಮಾಣ ಸಹಕಾರ ಸಂಘ (ನೋಂ), ಪದ್ಮನಾಭನಗರ ಬೆಂಗಳೂರು ಇವರು ಕತ್ರಿಗುಪ್ಪೆ ವಿಲೇಜ್ ವ್ಯಾಪ್ತಿಯಲ್ಲಿ ಎಷ್ಟು ಎಕರೆ ಪ್ರದೇಶದಲ್ಲಿ ನಿವೇಶನ ನಿರ್ಮಾಣ ಮಾಡಿದ್ದಾರೆ ; ಎಷ್ಟು ನಿವೇಶನಗಳನ್ನು ಸದಸ್ಯರಿಗೆ ವಿತರಿಸಿದ್ದಾರೆ ; ಸೈಟ್ ನಂಬರ್ ಸಹಿತ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧಿಕೃತ ಪ್ಲಾನ್ ಒದಗಿಸಿ ಹಾಗೂ ನಿವೇಶನದಾರರ ಪಟ್ಟಿಯನ್ನು ಒದಗಿಸುವುದು ;

ಊ) ಈ ರೀತಿ ನೌಕರರ ಅನೇಕ ಗೃಹ ನಿವೇಶನ ಸಹಕಾರ ಸಂಘಗಳು ಮೇಲಿನಂತೆ ಅವ್ಯವಹಾರ ಹಾಗೂ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದು ಇವುಗಳ ಮೇಲೆ ಇಲಾಖಾಧಿಕಾರಿಗಳು ಕ್ರಮ ಕೈಗೊಳ್ಳದಿರಲು ಕಾರಣವೇನು ; ಹಾಗೂ ಯಾವ ಕ್ರಮ ಕೈಗೊಳ್ಳಲಾಗುವುದು ?

## ಕೃಷಿ ಯೋಜನೆಯಡಿಯಲ್ಲಿ ರೈತರಿಗೆ ದೊರಕುತ್ತಿರುವ ಸೌಲಭ್ಯದ ಬಗ್ಗೆ

**ಶ್ರೀ ಆರ್. ಪ್ರಸನ್ನ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) –**

೧೪೯ (೧೧೪೨) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ರೈತರಿಗೆ ಯಾವ ಯಾವ ಸೌಲಭ್ಯಗಳು ದೊರಕುತ್ತಿವೆ ಹಾಗೂ ಇದರ ಮಾನದಂಡಗಳೇನು ; ಪ್ರಸಕ್ತ ಯಾವ ಯಾವ ಜಿಲ್ಲೆಗಳು ಆಯ್ಕೆ ಆಗಿರುತ್ತದೆ ; (ವಿವರ ನೀಡುವುದು)

(ಆ) ಈ ಬಾರಿ ವಾಡಿಕೆಗಿಂತ ಬಹಳ ಕಡಿಮೆ ಮಳೆ ಆಗಿರುವುದರಿಂದ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೃಷಿ ಭಾಗ್ಯ ಯೋಜನೆಯನ್ನು ವಿಸ್ತರಿಸುವ ಆಲೋಚನೆ ಸರ್ಕಾರದ ಮುಂದಿದೆಯೇ ;

(ಇ) ಬರಗಾಲದಿಂದ ತತ್ತರಿಸಿರುವ ಶಿವಮೊಗ್ಗ ಜಿಲ್ಲೆಯನ್ನು ಕೃಷಿ ಭಾಗ್ಯ ಯೋಜನೆಗೆ ಆಯ್ಕೆ ಮಾಡುವ ಉದ್ದೇಶ ಸರ್ಕಾರದ ಮುಂದಿದೆಯೇ ?

# ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಇರುವ ಕೃಷಿ ಭೂಮಿಯ ಬಗ್ಗೆ

**ಶ್ರೀ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ (ಶಿಕ್ಷಕರ ಕ್ಷೇತ್ರ) –**

೧೫೦ (೧೧೪೮) ಕೃಷಿ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಇರುವ ಕೃಷಿ ಭೂಮಿ ಎಷ್ಟು ;

(ಆ) ಕಳೆದ ಎರಡು ವರ್ಷಗಳಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಎಷ್ಟು ಎಕರೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಲಾಗಿದೆ ; ಈ ರೀತಿಯಾಗಿ ಪರಿವರ್ತಿಸಿದ ಭೂಮಿಯನ್ನು ಯಾವ ಉದ್ದೇಶಕ್ಕಾಗಿ ಬಳಸಲಾಗುತ್ತಿದೆ ;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕಳೆದ ಎರಡು ವರ್ಷಗಳಲ್ಲಿ ಸರ್ಕಾರವು ಎಷ್ಟು ಎಕರೆ ಕೃಷಿ ಭೂಮಿಯನ್ನು ಸರ್ಕಾರಿ ಯೋಜನೆಗಳಿಗಾಗಿ ಪಡೆದುಕೊಂಡಿದೆ ;

ಈ) ಈ ರೀತಿಯಾಗಿ ವಶಪಡಿಸಿಕೊಂಡಿರುವ ಕೃಷಿ ಭೂಮಿಯನ್ನು ಸರ್ಕಾರವು ಯಾವ ಉದ್ದೇಶಕ್ಕಾಗಿ ಬಳಕೆ ಮಾಡುತ್ತಿದೆ ? (ವಿವರ ನೀಡುವುದು)

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ಬೆಂಗಳೂರು, ಕಾ.ಸೂ. 1119 ಪ್ರತಿಗಳು 1500 – ಪಿ2